# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 790 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI) ದವರು ಮಾನ್ಯ ಶಾಸಕರುಗಳಿಗೆ ಫಾಸ್ಟ್‌ಟ್ಯಾಗ್ ನೀಡಿದ್ದರೂ ಕೂಡ (Exempted Category) ಹಲವಾರು ಟೋಲ್ ಪ್ಲಾಜಾಗಳಲ್ಲಿ ಮಾನ್ಯ ಶಾಸಕರುಗಳ ಕಾರುಗಳ ಪ್ರವೇಶಕ್ಕೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ನವದೆಹಲಿಯ ದಿನಾಂಕ:09.11.2019 ರ ಫಾಸ್ಟ್‌ಟ್ಯಾಗ್ ಅಳವಡಿಕೆಯ ಪ್ರಮಾಣಿತ ಕಾರ್ಯಾಚರಣಾ ವಿಧಾನ (SOP) ಪ್ರಕಾರ ಮಾನ್ಯ ವಿಧಾನ ಸಭಾ/ವಿಧಾನ ಪರಿಷತ್/ಲೋಕ ಸಭಾ /ರಾಜ್ಯ ಸಭಾ ಸದಸ್ಯರವರಿಗೆ, ಗಣ್ಯ ವ್ಯಕ್ತಿಗಳಿಗೆ ಮತ್ತು ಹಲವು ವಿಶೇಷ ವಾಹನಗಳಿಗೆ ಟೋಲ್ ಪ್ಲಾಜಾಗಳಲ್ಲಿ ಸುಗಮ ಸಂಚಾರಕ್ಕಾಗಿ ಕೋರಿಕೆ ಮೇಲೆ ಶುಲ್ಕ ವಿನಾಯಿತಿ ಫಾಸ್ಟ್‌ಟ್ಯಾಗ್ ನೀಡಲಾಗುತ್ತಿದೆ ಈ ಕ್ರಿಯೆ ನಿರಂತರವಾಗಿದೆ, ರಾಜ್ಯದ ಎಲ್ಲಾ ಟೋಲ್ ಪ್ಲಾಜಾಗಳಲ್ಲಿ ಎಡಭಾಗದಲ್ಲಿ, ಎರಡು ಕಡೆ ಮಾರ್ಗಗಳಲ್ಲಿ ಅಂಬುಲೆನ್ಸ್, ಗಣ್ಯ ಮತ್ತು ಅತೀ ಗಣ್ಯರ ವಾಹನಗಳ ಸುಗಮ ಸಂಚಾರಕ್ಕಾಗಿ ಪ್ರತ್ಯೇಕ ಪಥಗಳನ್ನು ಮೀಸಲಿಡಲಾಗಿದೆ ಮತ್ತು ಈ ವಾಹನಗಳ ಅಡಚಣೆ ರಹಿತ ಸಂಚಾರಕ್ಕೆ ಅಡ್ಡಿಯಾಗದಂತೆ ಖಚಿತಪಡಿಸಿಕೊಂಡು ಕಾರ್ಯನಿರ್ವಹಿಸಲು ಟೋಲ್ ಪ್ಲಾಜಾಗಳನ್ನು ನಿರ್ವಹಿಸುತ್ತಿರುವ ಎಲ್ಲಾ ರಿಯಾಯಿತಿದಾರರಿಗೆ ಸೂಚನೆ ನೀಡಲಾಗಿದೆ, ಅದರಂತೆ ಅಡಚಣೆ ರಹಿತ ಸಂಚಾರಕ್ಕೆ ಕ್ರಮವಹಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿದ್ದಾರೆ.<br><br>ದಿನಾಂಕ:16.02.2021 ರಿಂದ ಎಲ್ಲಾ ರಾಷ್ಟ್ರೀಯ ಹೆದ್ದಾರಿ ಟೋಲ್ ಪ್ಲಾಜಾಗಳಲ್ಲಿ ಅಡಚಣೆ ರಹಿತ ಸಂಚಾರಕ್ಕಾಗಿ ಫಾಸ್ಟ್‌ಟ್ಯಾಗ್ ವ್ಯವಸ್ಥೆ ಕಲ್ಪಿಸಲಾಗಿದೆ, ಆದ್ದರಿಂದ ಇಂತಹ ಟೋಲ್ ಪ್ಲಾಜಾಗಳಲ್ಲಿ ಸಾಗುವ ಎಲ್ಲಾ ವಾಹನಗಳು ಫಾಸ್ಟ್‌ಟ್ಯಾಗ್ ಹೊಂದುವುದು ಕಡ್ಡಾಯವಾಗಿದೆ. ಈಗಾಗಲೇ ಗಣ್ಯ ವ್ಯಕ್ತಿಗಾಗಲಿ, ಸಾರ್ವಜನಿಕರಿಗಾಗಲಿ ಟೋಲ್ ಪ್ಲಾಜಾ ದಲ್ಲಿ ಯಾವುದೇ ತೊಂದರೆಯಾಗದಂತೆ ಎಚ್ಚರಿಕೆ ವಹಿಸಲು ಸಂಬಂಧಪಟ್ಟ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. |
| ಆ) | NHAI ರವರು ನೀಡಿರುವ ಫಾಸ್ಟ್‌ಟ್ಯಾಗ್ ಗಳನ್ನು ಹೊಂದಿರುವ ಶಾಸಕರುಗಳ ಕಾರ್ ಗಳಿಗೆ ಕರ್ನಾಟಕದ ಯಾವ ಟೋಲ್ ಪ್ಲಾಜಾಗಳಲ್ಲಿ ಮುಕ್ತ ಪ್ರವೇಶವನ್ನು ನಿರಾಕರಿಸಲಾಗಿದೆ; ಅದಕ್ಕೆ ಕಾರಣವೇನು; (ವಿವರ ನೀಡುವುದು) | |

| | | |
|---|---|---|
| | | NH (PWD) ಮತ್ತು NHAI ವ್ಯಾಪ್ತಿಯಲ್ಲಿ ಫಾಸ್ಟ್‌ಟ್ಯಾಗ್ ಗಳನ್ನು ಹೊಂದಿರುವ ಶಾಸಕರುಗಳ ಕಾರ್‌ಗಳಿಗೆ ಟೋಲ್ ಪ್ಲಾಜಾಗಳಲ್ಲಿ ಮುಕ್ತ ಪ್ರವೇಶವಿದ್ದು, ಮುಕ್ತ ಪ್ರವೇಶ ನಿರಾಕರಿಸಿರುವ ಘಟನೆಗಳು ಗಮನಕ್ಕೆ ಬಂದಿರುವುದಿಲ್ಲವೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತಿಳಿಸಿರುತ್ತಾರೆ. |
| ಇ) | ನೈಸ್ ರಸ್ತೆ ಟೋಲ್ ಗೇಟ್‌ಗಳಲ್ಲಿ NHAI ದವರು ಶಾಸಕರುಗಳ ಕಾರ್‌ಗಳಿಗೆ ನೀಡಿರುವ **Fastag** ಗಳಿಗೆ ಮಾನ್ಯತೆ ಇಲ್ಲದಿರುವುದು/ಮುಕ್ತ ಪ್ರವೇಶವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದಕ್ಕೆ ಕಾರಣಗಳೇನು? | ನೈಸ್ ರಸ್ತೆಯ ಸೆಕ್ಷನ್-ಎ ಭಾಗದಲ್ಲಿನ ಪೆರಿಫೆರಲ್ ರಸ್ತೆ ಮತ್ತು ಲಿಂಗ್ ರಸ್ತೆಯ ಟೋಲ್ ಗೇಟ್‌ಗಳಲ್ಲಿ NHAI ವತಿಯಿಂದ ಮಾನ್ಯ ಶಾಸಕರುಗಳ ಕಾರುಗಳಿಗೆ ನೀಡಿರುವ **Fastag** ಗಳಿಗೆ ಮಾನ್ಯತೆ ಇಲ್ಲದಿರುವುದು/ಮುಕ್ತ ಪ್ರವೇಶವಿಲ್ಲದಿರುವುದರ ಬಗ್ಗೆ ಇದುವರೆವಿಗೂ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |

ಕಡತ ಸಂಖ್ಯೆ: ಲೋಇ 57 ಸಿಎನ್‌ಹೆಚ್ 2023 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು